**ಒ.ಎಸ್.ನಂಬ್ರ: 68/2024 ಪಿ .ಡಬ್ಲ್ಯೂ : 1**

ದಿನಾಂಕ: 02-07-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಮುಂದುವರಿದ ಪಾಟಿ ಸವಾಲು: ಪ್ರತಿವಾದಿ ಪರ ಶ್ರೀ. ಸಿ.ಎಸ್.ಹೆಚ್ ವಕೀಲರಿಂದ**

1. ಶ್ರೀ.ಅಜಮಹಾ ವಿಷ್ಣು ದೇವಸ್ಥಾನದಿಂದ ನಮ್ಮ ಮನೆಗೆ ಹೋಗುವ ರಸ್ತೆಯನ್ನು ಯಾವ ಕಾರಣಕ್ಕೆ ಪಟ್ಟಣ ಪಂಚಾಯತಿಯವರು ಕಾಂಕ್ರೀಟ್ ರಸ್ತೆ ಹಾಕಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲಎಂದು ನುಡಿಯುತ್ತಾರೆ. ಸಾಕ್ಷಿಗೆ 1 ಫೋಟೊ ತೋರಿಸಿದ್ದು ಅದರಲ್ಲಿ ಇರುವ ಫೋಟೊ ತಮ್ಮದಾ ಅಂತ ಕೇಳಿದ್ದು ಸಾಕ್ಷಿ ಅದು ನಾನಲ್ಲ ಅಂತ ಹೇಳಿರುತ್ತಾರೆ . ಸಾಕ್ಷಿಗೆ ಈಗ 3 ಫೋಟೋಗಳನ್ನು ತೋರಿಸಿದ್ದು ಅದನ್ನು ನೋಡಿ ಸಾಕ್ಷಿ ತಾನು ಇರುವುದಾಗಿ ಒಪ್ಪಿಕೊಂಡಿರುವುದರಿಂದ ಸದರಿ 3 ಫೋಟೊಗಳನ್ನು ನಿಡಿ 1 ರಿಂದ 3 ಅಂತ ಗುರುತಿಸಲಾಯಿತು. ಸಾಕ್ಷಿಗೆ ಈಗ 3 ಫೋಟೋಗಳನ್ನು ತೋರಿಸಿ ಶ್ರೀ.ಅಜಮಹಾ ವಿಷ್ಣು ದೇವಸ್ಥಾನ ದಿಂದ ಮನೆಗೆ ಹೋಗುವ ದಾರಿ ಇರುತ್ತದೆ ಎಂದರೆ ಸಾಕ್ಷಿ ನಮ್ಮ ಮನೆಗೆ ಹೋಗುವ ನಮ್ಮ ತೋಟದ ದಾರಿ ಇರುತ್ತದೆ ಎಂದು ನುಡಿದಿದ್ದರಿಂದ ಸದರಿ 3 ಫೋಟೊಗಳನ್ನು ನಿಡಿ 4 ರಿಂದ ನಿಡಿ 6 ಅಂತ ಗುರುತಿಸಲಾಯಿತು .

2. ಸಾರ್ವಜನಿಕರಿಗೆ ನಾನು ತೊಂದರೆ ಕೊಟ್ಟದರಿಂದ ಸದರಿ ಸಾರ್ವಜನಿಕರು ಪಟ್ಟಣ ಪಂಚಾಯತಿರವರಿಗೆ ದೂರು ಕೊಟ್ಟ ಮೇರೆಗೆ ರಸ್ತೆಯನ್ನು ತೆರವುಗೊಳಿಸಲು ಅಲ್ಲಿಗೆ ಹೋಗಿರುತ್ತಾರೆ ಎಂದರೆ ಸಾಕ್ಷಿ ಅದು ನಮ್ಮ ತೋಟದ ರಸ್ತೆಯಾಗಿದ್ದು ಯಾವುದೇ ಸಾರ್ವಜನಿಕರ ರಸ್ತೆ ತೋಟದ ಒಳಗೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾರ್ವಜನಿಕರ ದೂರಿನ ಆದಾರದ ಮೇಲೆ ಸಾರ್ವಜನಿಕ ರಸ್ತೆಯನ್ನು ಸಂಚಾರಕ್ಕೆ ತೆರವುಗೊಳಿಸಿದ್ದರಿಂದ ಸಿಟ್ಟಿನಿಂದ ನಾನು ಅವರ ವಿರುದ್ದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಪಟ್ಟಣ ಪಂಚಾಯತಿ ರವರ ಮೇಲೆ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅವರು ಸುಮಾರು ಬಾರಿ ನನಗೆ ತೊಂದರೆ ಕೊಡಲು ಪ್ರಯತ್ನಿಸಿರುತ್ತಾರೆ ಎಂದು ನುಡಿಯುತ್ತಾರೆ. ಕುಂಬಕ್ಕಿ ಬೈಲಿನ ನಿವಾಸಿಗಳು ಹೆದ್ದಾರಿ ಕೆರೆಯಿಂದ ಶ್ರೀ.ಅಜಮಹಾ ವಿಷ್ಣು ದೇವಸ್ಥಾನ ದಿಂದ ಇದೇ ಸಾರ್ವಜನಿಕ ರಸ್ತೆಯಲ್ಲಿ ಹೋಗುತ್ತಾರೆ ಎಂದರೆ ಸರಿಯಲ್ಲ.

3. ಕುಂಬಕ್ಕಿ ಬೈಲಿನ ನಿವಾಸಿಗಳಿಗೆ ಈ ದಾರಿ ಯನ್ನು ಹೊರತುಪಡಿಸಿ ಬೇರೆ ದಾರಿ ಇಲ್ಲ ಎಂದರೆ ಸರಿಯಲ್ಲ . ಪಟ್ಟಣ  ಪಂಚಾಯತಿ ಸದರಿ ರಸ್ತೆಯನ್ನು ಕಾಂಕ್ರೀಟ್ ರಸ್ತೆ ಮಾಡುತ್ತಾರೆ ಅಂತ ನಾನು ಸುಳ್ಳು ಸಾಧನೆ ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ . ಬಿ ಅನುಸೂಚಿ ಸ್ವತ್ತು ನಾನು ಖರೀದಿ ಮಾಡಿರುವ ಸ್ವತ್ತು ಅಲ್ಲ ನಮ್ಮ ಸ್ವಾಧೀನದಲ್ಲಿರುವ ಕುಮ್ಕಿ ಸ್ವತ್ತಿನ ಆಸ್ತಿ ಎಂದು ನುಡಿಯುತ್ತಾರೆ . ಈ ದಾವೆಯನ್ನು ನಾನು ಸರ್ಕಾರಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ನಮ್ಮ ಹಿಂದಿನವರು ಮಾಡಿಕೊಂಡು ಬಂದಿರುತ್ತಾರೆ ಕಬಳಿಸುವ ಉದ್ದೇಶ ಇರುವುದಿಲ್ಲ ಎಂದು ನುಡಿಯುತ್ತಾರೆ .

**ಮರುವಿಚಾರಣೆ : ಇಲ್ಲ**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**